**ಕರ್ನಾಟಕ ಸರ್ಕಾರ**

ಸಂಖ್ಯೆ:ಕಾಇ 179 ಎಲ್‌ಇಟಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07 /05/2021.

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಜಂಟಿ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ,
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು.

7/6/21
274

ಮಾನ್ಯರೆ,

ವಿಷಯ: 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಸಲ್ಲಿಸಿರುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಪ್ರಸ್ತಾವನೆ ಸಂಖ್ಯೆ: ಅಸಂಕಾ/ಆಯವ್ಯಯ/ಕ್ರಿ.ಯೋ/ಸಿ.ಆರ್-03/2020-21, ದಿನಾಂಕ:20-04-2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಉಲ್ಲೇಖಿತ ಪ್ರಸ್ತಾವನೆಯಲ್ಲಿ ಕೋರಿರುತ್ತೀರಿ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

- ಪ್ರಸ್ತಾಪಿತ ಕ್ರಿಯಾ ಯೋಜನೆಯು ಒದಗಿಸಿರುವ ಆಯವ್ಯಯದ ಮಿತಿಯನ್ನು ಮೀರಬಾರದು.
- ಯೋಜನೆಯ ಪ್ರಗತಿಯ ವರದಿಯನ್ನು ತಪ್ಪದೇ ಪ್ರತಿ ತಿಂಗಳು ಸಲ್ಲಿಸಬೇಕು.
- ಈ ಕ್ರಿಯಾ ಯೋಜನೆಯನ್ನು ಮಂಡಳಿಯ ಸರ್ವ ಸದಸ್ಯರ ಸಭೆಯಲ್ಲಿ ಘಟನೋತ್ತರ ಅನುಮತಿಯನ್ನು ಪಡೆಯುವುದು.
- ಕ್ರಿಯಾ ಯೋಜನೆಯಲ್ಲಿ ಏನಾದರು ಬದಲಾವಣೆಗಳನ್ನು ಮಾಡುವುದಾದಲ್ಲಿ ಕಡ್ಡಾಯವಾಗಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕು.

- ಯೋಜನೆಗಳನ್ನು ಕೈಗೊಳ್ಳುವಾಗ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದಿದ್ದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ, 2000ರ ನಿಯಮಗಳಿಗನುಸಾರವಾಗಿ ಕೈಗೊಳ್ಳತಕ್ಕದ್ದು.
- ಆಯವ್ಯಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಹೊರಡಿಸಿರುವ ಆಯವ್ಯಯ ಸಲಹಾ ಟಿಪ್ಪಣ ಸಂಖ್ಯೆ: ಆಇ 91 ವೆಚ್ಚ-9/2021, ದಿನಾಂಕ:09.04.2021ನ್ನು ಹಾಗೂ ಅರ್ಥಿಕ ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ / ಟಿಪ್ಪಣಿಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಯು ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಆರ್ಥಿಕ ಇಲಾಖೆಯು ಹೊರಡಿಸುವ ಅಧಿಕಾರ ಪ್ರತ್ಯಾಯೋಜನೆಗನುಸಾರವಾಗಿ ಕ್ರಿಯಾ ಯೋಜನೆಯ ಅನುಷ್ಠಾನವನ್ನು ಕೈಗೊಳ್ಳತಕ್ಕದ್ದು.
- ಕೇಂದ್ರ ಸರ್ಕಾರ/ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ನೀಡುವ ಸೂಚನೆಯನ್ನು ಪಾಲಿಸತಕ್ಕದ್ದು.

(ಮಾನ್ಯ ಇಲಾಖಾ ಸಚಿವರಿಂದ
ಅನುಮೋದಿಸಲ್ಪಟ್ಟಿದೆ)

ತಮ್ಮ ನಂಬುಗೆಯ,

ಪ್ರದೀಪ್ ಕುಮಾರ್

(ಪ್ರದೀಪ್ ಕುಮಾರ್ ಬಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

## ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ (ಲೆಕ್ಕ ಶೀರ್ಷಿಕೆ 2230-01-103-7-03) ಜಾರಿಗಾಗಿ 2021-22ನೇ ಸಾಲಿನ ಕ್ರಿಯಾ ಯೋಜನೆ

### I. ಪ್ರಸ್ತಾವನೆ:

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತದೆ.

**(1) ಅಪಘಾತ ಪರಿಹಾರ ಸೌಲಭ್ಯ:-**

- ಕರ್ನಾಟಕ ರಾಜ್ಯದಲ್ಲಿ ಊರ್ಜಿತ ಚಾಲನ ಪರವಾನಗಿ ಪಡೆದ ಖಾಸಗಿ ವಾಣಿಜ್ಯ ವಾಹನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಚಾಲಕರು, ನಿವಾಹಕರು ಹಾಗೂ ಕ್ಲೀನರ್‌ಗಳಿಗೆ ಅಪಘಾತ ಪರಿಹಾರ ಸೌಲಭ್ಯ ಒದಗಿಸುವುದು.
- ಅಪಘಾತದಿಂದ ನಿಧನರಾದ ಪ್ರಕರಣದಲ್ಲಿ ರೂ.5 ಲಕ್ಷ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣದಲ್ಲಿ ರೂ.2 ಲಕ್ಷಗಳವರೆಗೆ ಪರಿಹಾರ ಹಾಗೂ ತಾತ್ಕಾಲಿಕ ದುರ್ಬಲತೆ ಪ್ರಕರಣಗಳಲ್ಲಿ ರೂ. 1 ಲಕ್ಷಗಳವರೆಗೆ ಆಸ್ಪತ್ರೆ ವೆಚ್ಚದ ಮರುಪಾವತಿಗೆ ಅವಕಾಶ.

**(2) ಶೈಕ್ಷಣಿಕ ಧನಸಹಾಯ:-**

ಸರ್ಕಾರದ ಮೇಲಿನ ಆದೇಶದನ್ವಯ, ಅಪಘಾತದಲ್ಲಿ ಮರಣ ಹೊಂದಿದ ಅಥವಾ ಸಂಪೂರ್ಣ ದುರ್ಬಲತೆ ಹೊಂದಿದ ಚಾಲಕರ ಮಕ್ಕಳ ವಿದ್ಯಾಭ್ಯಾಸ ಸ್ಥಗಿತಗೊಳ್ಳದಂತೆ ತಡೆಹಿಡಿಯಲು ಹಾಗೂ ಮುಂದುವರೆಸಲು ಉತ್ತೇಜಿಸುವ ಉದ್ದೇಶದಿಂದ ಅಂತಹ ಚಾಲಕರ ಇಬ್ಬರು ಮಕ್ಕಳಿಗೆ 1 ನೇ ತರಗತಿಯಿಂದ ಪದವಿಪೂರ್ವ / 12ನೇ ತರಗತಿಯವರೆಗೆ ವ್ಯಾಸಂಗ ಮಾಡಲು ವಾರ್ಷಿಕ 10,000/- ರೂ.ನಂತೆ ಶೈಕ್ಷಣಿಕ ಧನಸಹಾಯ ನೀಡಲಾಗುತ್ತಿದೆ.

**(3) ಸ್ಮಾರ್ಟ್ ಕಾರ್ಡ್ ಸೌಲಭ್ಯ :-**

ಈ ಯೋಜನೆಯಡಿ ಸಾರಿಗೆ ಇಲಾಖೆಯಿಂದ ನೀಡಲ್ಪಟ್ಟ ಖಾಸಗಿ ವಾಣಿಜ್ಯ ಸಾರಿಗೆ ಚಾಲನೆಯ ಊರ್ಜಿತ ಚಾಲನಾಪತ್ರ ಹೊಂದಿದ ಎಲ್ಲಾ ಚಾಲಕರು ಫಲಾನುಭವಿಯಾಗುತ್ತಿದ್ದು, ಸರ್ಕಾರದಿಂದ ಅಧಿಸೂಚಿತ ಅಧಿಕಾರಿಗಳಿಂದ ನೋಂದಾಯಿಸಲ್ಪಟ್ಟ ನಿರ್ವಾಹಕರು ಹಾಗೂ ಕ್ಲೀನರ್‌ಗಳು ಫಲಾನುಭವಿಯಾಗುತ್ತಾರೆ. ಯೋಜನೆಯಡಿ ಲಭ್ಯವಿರುವ ಸೌಲಭ್ಯಗಳ ಕುರಿತು ಅವರಲ್ಲಿ ಅರಿವು ಮೂಡಿಸಲು ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ.

**(4) ಕಾರ್ಮಿಕರ ಸಮ್ಮಾನ ಪ್ರಶಸ್ತಿ ಹಾಗೂ ವಿಶೇಷ ಪುರಸ್ಕಾರ:-**

ಸರ್ಕಾರಿ ಆದೇಶ ಸಂಖ್ಯೆ: ಕಾಇ 149 ಎಲ್‌ಇಟಿ 2018 ಭಾಗ-1, ದಿನಾಂಕ:24-02-2020ರನ್ವಯ ಪ್ರತಿ ವರ್ಷ ಉತ್ತಮ ಹಾಗೂ ಸುರಕ್ಷಿತ ವಾಹನ ಚಾಲನೆ ಮಾಡಿದ ಚಾಲಕರನ್ನು ಗುರುತಿಸಿ, ಮಾರ್ಚ್ 1 ರಂದು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಆಚರಿಸುವ ಕಾರ್ಮಿಕ ಸಮ್ಮಾನ ದಿನದಂದು "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.

**(5) ಅಪಘಾತ ಜೀವರಕ್ಷಕ ಕಾರ್ಯಕ್ರಮ :-**
ಅಪಘಾತಕ್ಕೀಡಾದ ಗಾಯಳುಗಳನ್ನು ರಕ್ಷಿಸಿ ತಕ್ಷಣವೇ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡುವ ಮೂಲಕ ಜೀವರಕ್ಷಣೆ ಮಾಡುವ ಯೋಧರನ್ನು ಸಜ್ಜುಗೊಳಿಸಲು 2016-17ನೇ ಸಾಲಿನಿಂದ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 3000 ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿ ನೀಡಲು ಉದ್ದೇಶಿಸಲಾಗಿದೆ.

**(6) ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು: –**
ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಯಡಿ ದೊರಕುವ ಸೌಲಭ್ಯಗಳ ಕುರಿತು ಅಸಂಘಟಿತ ಕಾರ್ಮಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಕರಪತ್ರಗಳ ಮುದ್ರಣ, ಬ್ಯಾನರ್, ಹೋರ್ಡಿಂಗ್ಸ್‌ಗಳ ಅಳವಡಿಕೆ, ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು, ಲಭ್ಯವಿರುವ ಎಲ್ಲಾ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

## II. ಯೋಜನೆಗೆ ಆಯವ್ಯಯ:

ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯ ಸಮರ್ಪಕ ಜಾರಿಗಾಗಿ ಅವಶ್ಯಕವಿರುವ ಅನುದಾನವನ್ನು ಸರ್ಕಾರವು ಲೆಕ್ಕಶೀರ್ಷಿಕೆ: 2230-01-103-7-03ರಡಿ ಪ್ರತಿ ವರ್ಷವು ಹಂಚಿಕೆ ಮಾಡುತ್ತಿದೆ. 2021--22ನೇ ಸಾಲಿನಲ್ಲಿ ಈ ಲೆಕ್ಕ ಶೀರ್ಷಿಕೆಯಡಿ ಕೇವಲ ರೂ.01.00 ಲಕ್ಷಗಳನ್ನು ಹಂಚಿಕೆ ಮಾಡಿದ್ದು, ಯೋಜನೆಯ ಜಾರಿಗೆ ಹಿಂದಿನ ಸಾಲುಗಳಲ್ಲಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ಬಾಕಿಯಿರುವ ಅನುದಾನದ ಮೊತ್ತ ಮತ್ತು ಬಡ್ಡಿಯ ಮೊತ್ತ ಸೇರಿ ಒಟ್ಟು ರೂ.1572.83 ಲಕ್ಷಗಳನ್ನು (ನೋಂದಣಿ ಶುಲ್ಕ ಹೊರತುಪಡಿಸಿ) ಬಳಸಿಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಆದ್ದರಿಂದ, ಲೆಕ್ಕ ಶೀರ್ಷಿಕೆ 2230-01-103-7-03ಯಡಿ ಲಭ್ಯವಿರುವ ಒಟ್ಟು ಅನುದಾನ ರೂ. 1573.83 ಲಕ್ಷಗಳನ್ನು ಮೇಲಿನ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಈ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಉದ್ದೇಶ | ಒಟ್ಟು ಮೊತ್ತ | ಒಟ್ಟು ಮೊತ್ತದ ವಿಂಗಡಣೆ | ಅಂದಾಜು ಫಲಾನುಭವಿಗಳ ಸಂಖ್ಯೆ | ದರ | ಒಟ್ಟು ಮೊತ್ತ |
|---|---|---|---|---|---|---|
| 1. | ಮಂಡಳಿಯಿಂದ ನೇರವಾಗಿ ಅಪಘಾತ ಪರಿಹಾರ ಯೋಜನೆ. ಮರಣ ಪ್ರಕರಣಗಳಲ್ಲಿ – ರೂ.5 ಲಕ್ಷ, ಶಾಶ್ವತ ದುರ್ಬಲತೆ – ರೂ.2 ಲಕ್ಷ, ತಾತ್ಕಾಲಿಕ ದುರ್ಬಲತೆ ಮತ್ತು ಆಸ್ಪತ್ರೆ ವೆಚ್ಚ – ರೂ.1 ಲಕ್ಷದವರೆಗೆ | 1178 | ಮರಣ ಪ್ರಕರಣದಲ್ಲಿ ನೀಡಬಹುದಾದ ಪರಿಹಾರ | 225 | 5 | 1125 |
| | | | ಶಾಶ್ವತ ದುರ್ಬಲತೆ | 10 | 2 | 20 |
| | | | ತಾತ್ಕಾಲಿಕ ದುರ್ಬಲತೆ ಮತ್ತು ಆಸ್ಪತ್ರೆ ವೆಚ್ಚ | 33 | 1 | 33 |
| 2. | ಅಪಘಾತದಲ್ಲಿ ನಿಧನ ಹೊಂದಿದ ಅಥವಾ ಸಂಪೂರ್ಣ ದುರ್ಬಲತೆ ಹೊಂದಿದ ಚಾಲಕರ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ ತರಗತಿ | 20 | ಅಪಘಾತದಲ್ಲಿ ನಿಧನ ಹೊಂದಿದ ಅಥವಾ ಸಂಪೂರ್ಣ ದುರ್ಬಲತೆ ಹೊಂದಿದ ಚಾಲಕರ, ನಿರ್ವಾಹಕರ ಹಾಗೂ ಕ್ಲೀನರ್‌ಗಳ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ | 200 | 0.1 | 20 |

| | | | | | | |
|---|---|---|---|---|---|---|
| | ಯಿಂದ ಪದವಿ ಪೂರ್ವ/12ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಾರ್ಷಿಕ ಶೈಕ್ಷಣಿಕ ಧನ ಸಹಾಯ | | ತರಗತಿ ಯಿಂದ ಪದವಿ ಪೂರ್ವ/12ನೇ ತರಗತಿಯವರೆಗೆ ವಾರ್ಷಿಕ ರೂ. 10,000/-ರಂತೆ ಶೈಕ್ಷಣಿಕ ಧನ ಸಹಾಯ | | | |
| 3. | ಸ್ಮಾರ್ಟ್ ಕಾರ್ಡ್ ಸೌಲಭ್ಯ | 200 | ಸಾರಿಗೆ ಇಲಾಖೆಯಿಂದ ನೀಡಲ್ಪಟ್ಟ ಊರ್ಜಿತ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲನಾ ಪತ್ರವನ್ನು ಹೊಂದಿದ ಚಾಲಕರಿಗೆ ಸ್ಮಾರ್ಟ್ ಕಾರ್ಡ್ ನೀಡುವುದು. | 2 ಲಕ್ಷ | 0.001 | 200 |
| 4. | ಚಾಲಕರಿಗೆ ಶ್ರಮ ಸಮ್ಮಾನ ಹಾಗೂ ವಿಶೇಷ ಪುರಸ್ಕಾರ ಪ್ರಶಸ್ತಿ | 25.92 | ಪ್ರತಿ ಜಿಲ್ಲೆಯಲ್ಲಿ ತಲಾ ಒಂದರಂತೆ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರಗಳ ಹಾಗೂ 4 ಚಕ್ರಗಳ ವಾಹನ ಚಾಲಕರಿಗೆ ತಲಾ ರೂ.15,000/-ಗಳ ಮೌಲ್ಯದ ಪ್ರಥಮ ಪ್ರಶಸ್ತಿ. | 60 | 0.15 | 9 |
| | | | ಪ್ರತಿ ಜಿಲ್ಲೆಯಲ್ಲಿ ತಲಾ ಒಂದರಂತೆ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರಗಳ ಹಾಗೂ 4 ಚಕ್ರಗಳ ವಾಹನ ಚಾಲಕರಿಗೆ ತಲಾ ರೂ.10,000/-ಗಳ ಮೌಲ್ಯದ ದ್ವಿತೀಯ ಪ್ರಶಸ್ತಿ. | 60 | 0.10 | 6 |
| | | | ಪ್ರತಿ ಜಿಲ್ಲೆಯಲ್ಲಿ ತಲಾ ಒಂದರಂತೆ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರಗಳ ಹಾಗೂ 4 ಚಕ್ರಗಳ ವಾಹನ ಚಾಲಕರಿಗೆ ತಲಾ ರೂ.8,000/-ಗಳ ಮೌಲ್ಯದ ತೃತೀಯ ಪ್ರಶಸ್ತಿ. | 60 | 0.08 | 4.80 |
| | | | ಪ್ರತಿ ಜಿಲ್ಲೆಯಲ್ಲಿ ತಲಾ ಒಂದರಂತೆ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರಗಳ ಹಾಗೂ 4 ಚಕ್ರಗಳ ವಾಹನ ಚಾಲಕರಿಗೆ ತಲಾ ರೂ.1,000/-ರಂತೆ ವಿಶೇಷ ಪುರಸ್ಕಾರ. | 480 | 0.01 | 4.80 |
| | | | ಕಾರ್ಮಿಕ ಬಂಧು ಕಮೀಷನ್ (ಪ್ರತಿ ಪ್ರಶಸ್ತಿಗೆ ರೂ.200/-ರಂತೆ). | 660 | 0.002 | 1.32 |
| 5. | ಅಪಘಾತ ಜೀವರಕ್ಷಕ ಕಾರ್ಯಕ್ರಮ | 45 | ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳ ಚಾಲಕರಿಗೆ ಪ್ರಥಮ ಚಿಕಿತ್ಸೆ ತರಬೇತಿ ನೀಡಿ ಅಪಘಾತ ಜೀವರಕ್ಷಕ ಯೋಧರನ್ನಾಗಿ ಸಜ್ಜುಗೊಳಿಸುವುದು. | 3000 | 0.015 | 45 |
| 6. | ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು | 104.91 | ಸಂವಹನ ಚಟುವಟಿಕೆಗಳಾದ ಮಾಧ್ಯಮಗಳಲ್ಲಿ ಜಾಹೀರಾತು, ಕರಪತ್ರ ಮುದ್ರಣ, ಬ್ಯಾನರ್‌ಗಳು, ಇತ್ಯಾದಿಗಳ ವೆಚ್ಚ, ತಾಂತ್ರಿಕ ಅಭಿವೃದ್ಧಿ ಹಾಗೂ ಇತರ ಆಡಳಿತಾತ್ಮಕ ವೆಚ್ಚ. | | | 104.91 |
| | **ಒಟ್ಟು ಮೊತ್ತ** | **1573.83** | | | | **1573.83** |

******

S. L. [signature]